# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No 258/2013
CW-04 PW-07

ಹೆಸರು : ಗುರುಪಾದಯ್ಯಾ ಸ್ವಾಮಿ

ತಂ/ಗಂ ಹೆಸರು : ಶಂಭುಲಿಂಗಯ್ಯಾ ಸ್ವಾಮಿ

ವಯಸ್ಸು : 57 ವರ್ಷ

ಉದ್ಯೋಗ : ಲೆಕ್ಕಾಧಿಕಾರಿ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಚೇರಿ ,
ಜಿಲ್ಲಾ ಪಂಚಾಯತ, ಕಲಬುರಗಿ

ವಾಸ ಸ್ಥಳ : ಕಲಬುರಗಿ

---

**ಪ್ರಮಾಣವಚನ ಭೋಧಿಲಾಯಿತು. ದಿಃ 20-06-2023**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**

ನಾನು 2004 ರಿಂದ 2007 ರವರೆಗೆ ಚಿತ್ತಾಪೂರದ ಜಿಲ್ಲಾ ಪಂಚಾಯತ ಅಭಿಯಂತರರ ಕಚೇರಿ, ಉಪ ವಿಭಾಗ, ಚಿತ್ತಾಪೂರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನನಗೆ ಚಾಸಾಃ 01 ರವರ ಪರಿಚಯ ಇರುತ್ತದೆ . ನನಗೆ ಚಾಸಾಃ 05 ರಿಂದ 07 ರವರ ಪರಿಚಯ ನನಗೆ ಇರುವುದಿಲ್ಲ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರಿಗೆ ಈ ಪ್ರಕರಣದಲ್ಲಿ ಯಾವುದೇ ಹೇಳಿಕೆಯನ್ನಾಗಲೀ ಮತ್ತು ಮೂಲ ದಾಖಲೆಗಳನ್ನಾಗಲೀ ಒದಗಿಸಿರುವುದಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿಃ 27-06-2006 ರಂದು ನಾನು ಪೊಲೀಸರಿಗೆ 2003-04 ನೇ ಸಾಲಿನ ಅವಧಿಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ, ಮೋನಪ್ಪಾ ಮತ್ತು ಗೋಪಾಲ ರಾಠೋಡ ಇವರು ವಿವಿಧ ಕಾಮಗಾರಿಗಳ ಸಂಬಂಧ ನಗದು ಮತ್ತು ಆಹಾರ ಧಾನ್ಯಗಳನ್ನು ಒತ್ತುವಳಿ ಮಾಡಿ, ಕಾಮಗಾರಿ ಪೂರ್ಣಮಾಡದೇ ದುರುಪಯೋಗಪಡಿಸಿಕೊಂಡ ಬಗ್ಗೆ 2005 ನೇ ಸಾಲಿನ ಸೆಪ್ಟೆಂಬರ ಮತ್ತು ಅಕ್ಟೋಬರ ತಿಂಗಳುಗಳಲ್ಲಿ ಸದರಿ ಮೂರು ಆರೋಪಿಗಳ ವಿರುದ್ದ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ದಿಃ 03-03-2006 ರಂದು ಚಾಸಾಃ 01 ರವರ ಆದೇಶದ ಮೇರೆಗೆ ಅಪರಾಧ ಸಂಖ್ಯೆಃ 151/2005 ನೇದ್ದರ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ತಂದು ವಾಡಿ ಪೊಲೀಸರಿಗೆ ಹಾಜರುಪಡಿಸಿದ್ದು, ಪೊಲೀಸರು ಸದರಿ ದಾಖಲಾತಿಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಈ ಪ್ರಕರಣದಲ್ಲಿ ದಿಃ 07-10-2006 ರಂದು ಮೇಲ್ಕಂಡ ವಿಳಾಸದಲ್ಲಿ ------ ದಾಖಲು ಮಾಡಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ನಿಪಿ-8 ರಲ್ಲಿ ಬರೆದಿರುವ ವಿಷಯಗಳ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ.ಬಿ.ಎ ವಕೀಲರಿಂದ - ಏನು ಇಲ್ಲಾ**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.